ಈ) 5 ವರ್ಷಗಳು

ಉ) ಬಿ.ಎಂ.ಎಸ್. ಟ್ರಸ್ಟ್‌ರವರು ವಿನಿಮಯ ಮಾಡಲಾಗಿರುವ ಜಮೀನಿನ ಆವರಣದಲ್ಲಿ ಕಾಲೇಜನ್ನು ನಡೆಸುತ್ತಿದ್ದು ದೇವಾಲಯದ ಜಮೀನು ಖಾಲಿ ಇದ್ದು ಸದರಿ ನಿವೇಶನದಲ್ಲಿ ಕಾಲೇಜಿನ ಕಟ್ಟಡ ಪೂರ್ಣ ಆಗುವವರೆಗೂ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ತೊಂದರೆಯಾಗಬಾರದೆಂಬ ಉದ್ದೇಶದಿಂದ ಸದರಿ ಜಮೀನನ್ನು ಗುತ್ತಿಗೆಗೆ ನೀಡಲಾಗಿದೆ.

ಊ) ಇಲ್ಲ.

ಋ) ಪ್ರಶ್ನೆ ಉದ್ಭವಿಸುವುದಿಲ್ಲ.

ಹಂಪಿ ಶ್ರೀ ವಿರೂಪಾಕ್ಷ ದೇವಸ್ಥಾನದಲ್ಲಿ ನಡೆದಿರುವ ಅವ್ಯವಹಾರ

993 - ಶ್ರೀ ಸೋಮಪ್ಪ ಸುವರ್ಣ (ಮುಡಬಿದರೆ): ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ವಿಷಯಗಳನ್ನು ತಿಳಿಸುವರೆ?

ಅ) *ಹಂಪಿಯ ಶ್ರೀ ವಿರೂಪಾಕ್ಷಸ್ವಾಮಿ ದೇವಸ್ಥಾನವು ಮುಜರಾಯಿ ಇಲಾಖೆಗೆ ಸೇರಿರುವುದೆ?*

ಆ) *ಆ ದೇವಸ್ಥಾನದ ವಿಗ್ರಹಗಳ ಪುನರ್ ಪ್ರತಿಷ್ಠಾಪನೆ ನಡೆದಿರುವುದು ನಿಜವೇ?*

ಇ) *ಹಾಗಿದ್ದಲ್ಲಿ ಸರ್ಕಾರದ ಅನುಮತಿ ಪಡೆಯಲಾಗಿತ್ತೆ?*

ಈ) *ದೇವರ ವಿಗ್ರಹಗಳನ್ನು ಪುನರ್ ಪ್ರತಿಷ್ಠಾಪನೆ ಮಾಡುವ ಸಂದರ್ಭದಲ್ಲಿ ವಿಗ್ರಹಗಳ ಕೆಳಗೆ ಇದ್ದ ನಿಧಿ ಕಣ್ಮರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿರುತ್ತದೆಯೇ?*

ಉ) *ಈ ಬಗ್ಗೆ ಸರ್ಕಾರವು ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುವ ಬಗ್ಗೆ ಸಿ.ಐ.ಡಿ. ತನಿಖೆಯನ್ನು ಆರಂಭಿಸಲಾಗಿದೆಯೇ? ಹಾಗಿದ್ದ ಪಕ್ಷದಲ್ಲಿ ತನಿಖೆಯು ಯಾವ ಹಂತದಲ್ಲಿದೆ?*

ಊ)*ತನಿಖೆಯನ್ನು ಕೈಗೊಳ್ಳದಿದ್ದ ಪಕ್ಷದಲ್ಲಿ ಅದಕ್ಕೆ ಕಾರಣವೇನು?*

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) ಹೌದು.

ಆ) ಹೌದು.

ಇ) ಇಲ್ಲ.

ಈ) ನಿಧಿ ಕಣ್ಮರೆಯಾದ ಬಗ್ಗೆ ತಕರಾರು ಅರ್ಜಿ ಹಾಗೂ ಪತ್ರಿಕಾ ವರದಿ ಬಂದಿರುತ್ತದೆ.

ಉ) ಈಗ ತಾನೇ ಸಿ.ಐ.ಡಿ. ತನಿಖೆಗೆ ಒಪ್ಪಿಸಲಾಗಿದೆ.

ಊ) ಪ್ರಶ್ನೆ ಉದ್ಭವಿಸುವುದಿಲ್ಲ.

ಅತಿವೃಷ್ಟಿಯಿಂದ ಹಾನಿಯಾದ ಬೆಳೆಗೆ ಪರಿಹಾರ ಧನ

355-ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?